ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಿಜ. ಅಂಕೋಲ - ಹುಬ್ಬಳ್ಳಿ - ಜೋಳದರಾಶಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ - 63 ಎಂದು ದಿನಾಂಕ 9-2-98 ರ ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ಆದೇಶಿಸಿದೆ.

ಆ) ಈ ರಸ್ತೆ ಅಭಿವೃದ್ಧಿಗೆ 1993-99ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಹಣ ದೊರಕುವ ಸಂಭವ ಇದೆ.

ಹುಬ್ಬಳ್ಳಿ - ಧಾರವಾಡ ನಗರದ ಬೈಪಾಸ್ ರಸ್ತೆಯ ನಿರ್ಮಾಣ

168 (497) ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದ ಬೈಪಾಸ್ ರಸ್ತೆಯ, ನಿರ್ಮಾಣ ಕುರಿತು ಖಾಸಗಿ ಸಂಸ್ಥೆಯ ಜೊತೆಗಿನ ಒಪ್ಪಂದ ಅಂತಿಮವಾಗಿದೆಯೇ

ಆ) ಸದರಿ ರಸ್ತೆ ಕಾಮಗಾರಿ ಕೆಲಸ ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ದಿನಾಂಕ 5-2-98 ರಂದು ಖಾಸಗಿ ಸಂಸ್ಥೆ ಯಾದ ಮೆ: ಭರತ್ ಪೋರ್ಜ್ ಲಿ. ಪುಣೆ, ಇವರೊಂದಿಗೆ ಅಂತಿಮ ಕರಾರನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಮಾಡಿಕೊಂಡಿದೆ.

ಆ) ಕಾಮಗಾರಿಯನ್ನು ಮೇ 1998 ರಿಂದ ಪ್ರಾರಂಭಿಸಲಾಗುವುದು.

ಅರಣ್ಯ ಕೈಗಾರಿಕಾ ನಿಗಮದ ಮಂಗಳೂರು ಘಟಕದ ಅಭಿವೃದ್ಧಿಗಾಗಿ ಯೋಜನೆಗಳು

170 (281) ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್‌ಕಲ್) : ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1996-97 ನೇ ಸಾಲಿನಲ್ಲಿ ಅರಣ್ಯ ಕೈಗಾರಿಕಾ ನಿಗಮ ಎಷ್ಟು ಲಾಭಗಳಿಸಿದೆ;

ಆ) ಅರಣ್ಯ ಕೈಗಾರಿಕಾ ನಿಗಮದಲ್ಲಿನ ನೌಕರರಿಗೆ ಕಾಲಕಾಲಕ್ಕೆ ವೇತನ ಭತ್ಯೆ ಮುಂಬಡ್ತಿ ನೀಡಲಾಗುತ್ತಿರುವುದೇ;

ಇ) ಮಂಗಳೂರು ಘಟಕದ ಅಭಿವೃದ್ಧಿಗಾಗಿ ರೂಪಿಸಲಾಗಿರುವ ಯೋಜನೆಗಳಾವುವು?

ಶ್ರೀ ಜೆ. ಹೆಚ್. ಪಾಟೀಲ್ (ಮುಖ್ಯ ಮಂತ್ರಿಗಳು) :

ಅ) ರೂ. 26.74 ಲಕ್ಷ

ಆ) ಹೌದು

ಇ) ಜಂಟಿಯೋಜನೆಯ ಆಧಾರದ ಮೇಲೆ ಒಂದು ಮರ ಆಧಾರಿತ ಕೈಗಾರಿಕೆ ಸ್ಥಾಪನೆಗೆ ಪ್ರಸ್ತಾವವಿದೆ.